# ಜ್ಞಾಪನಾ ಪತ್ರ

ಸಂಘದ ಹೆಸರು : **ಸಮಗ್ರ ಕರ್ನಾಟಕ ಕಾರ್ಮಿಕರ ಸಂಘ**

ಸಂಘದ ವಿಳಾಸ : ನಂ.93/2, 1ನೇ ಮುಖ್ಯರಸ್ತೆ, ಎಂ.ಎಂ.ರಸ್ತೆ, ಬ್ಯಾಟರಾಯನಪುರ, ಮೈಸೂರು ರಸ್ತೆ, ಬೆಂಗಳೂರು-560 026.

ಸಂಘದ ಕಾರ್ಯವ್ಯಾಪ್ತಿ : ಕರ್ನಾಟಕ ರಾಜ್ಯ.

. ಸಂಘದ ಉದ್ದೇಶಗಳು:-

1. ಕರ್ನಾಟಕ ರಾಜ್ಯ ಅಸಂಘಟಿತ ವಲಸೆ ಕಾರ್ಮಿಕರು, ಕಟ್ಟಡ ಕಾರ್ಮಿಕರು, ಮಾನವ ಸಂಪನ್ಮೂಲ, ರೈತರ ಕಾರ್ಮಿಕರು, ವಾಹನ ಚಾಲಕರು, ಬಂದರು ಕಾರ್ಮಿಕರು, ಬೀದಿ ಬದಿ ವ್ಯಾಪಾರಿಗಳು, ಕಾರ್ಖಾನೆಯಲ್ಲಿ ದುಡಿಯುವ ಕಾರ್ಮಿಕರು, ಬಿಡಿ ಕಟ್ಟುವ ಕಾರ್ಮಿಕರು, ಮೀನು ಹಿಡಿಯುವ ಕಾರ್ಮಿಕರು, ಮಾರ್ಕೇಟ್‌ನಲ್ಲಿ ದುಡಿಯುವ ಕಾರ್ಮಿಕರು, ವೈದ್ಯಕೀಯ ಸೇವೆ ಸಲ್ಲಿಸುವ ಕಾರ್ಮಿಕರು, ಬಾರ್ ಅಂಡ್ ರೆಸ್ಟೋರೆಂಟ್ ಕಾರ್ಮಿಕರು, ವೈನ್ ಶಾಪ್‌ನಲ್ಲಿ ದುಡಿಯುವ ಕಾರ್ಮಿಕರು, ನೇಯ್ಗೆ ಕಾರ್ಮಿಕರು, ಪೌರ ಕಾರ್ಮಿಕರು ಮೊದಲಾದ ಕಾರ್ಮಿಕರ ಸರ್ವತೋಮುಖ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

2. ಎಲ್ಲಾ ಕಾರ್ಮಿಕರ ವರ್ಗದವರ ಕುಂದುಕೊರತೆಗಳಿಗೆ ಸ್ಪಂಧಿಸುವುದು ಮತ್ತು ಸಮಸ್ಯೆಗಳನ್ನು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದು, ಸಂಬಂಧಪಟ್ಟ ಅಧಿಕಾರಿ ವರ್ಗ ಮತ್ತು ಇಲಾಖೆ ಗಳೊಡನೆ ಸಹಕರಿಸುವುದು. ಸಂಘದ ಸರ್ವತೋಮುಖ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

3. ಕರ್ನಾಟಕ ಆರ್ಯ ಈಡಿಗ ಕಾರ್ಮಿಕರಲ್ಲಿ ಸ್ನೇಹಪರ, ಸಮಾನತೆ, ಜೇಷ್ಠತೆ, ಹಿತಾಸಕ್ತಿ, ಸಹೋದರತೆ, ಸಹಬಾಳ್ವೆ ಮತ್ತು ಸೌಹಾರ್ದತ ಮೊದಲಾದ ಉನ್ನತ ಭಾವನೆಗಳನ್ನು ಬೆಳೆಸುವುದು.

4. ಸಂಘದ ವತಿಯಿಂದ ರಾಷ್ಟ್ರೀಯ ಮತ್ತು ನಾಡ ಹಬ್ಬಗಳಾದ ಕನ್ನಡ ರಾಜ್ಯೋತ್ಸವ, ಗಣರಾಜ್ಯೋತ್ಸವ, ಕಾರ್ಮಿಕರ ದಿನಾಚರಣೆ, ಗಾಂಧಿಜಯಂತಿ, ಅಂಬೇಡ್ಕರ ಜಯಂತಿ, ಸ್ವಾತಂತ್ರ ದಿನಾಚರಣೆ ಮೊದಲಾದ ಹಬ್ಬಗಳನ್ನು ಆಚರಿಸುವುದು.

5. ಎಲ್ಲಾ ಕಾರ್ಮಿಕರ ವರ್ಗದವರಿಗೆ ಬೇರೆಯವರಿಂದ ಯಾವುದೇ ವಿಧವಾದ ತೊಂದರೆಗಳಾದಲ್ಲಿ, ಅವುಗಳನ್ನು ನಿವಾರಿಸುವಲ್ಲಿ ಕಾನೂನು ಸಲಹೆ ಪಡೆಯುವುದು.

6. ಸದರಿ ಸಂಘವು ತನ್ನ ಧ್ಯೇಯೋದ್ದೇಶಗಳ ಸಾಧನೆಗಳ ಈಡೇರಿಕೆಗಾಗಿ ಇತರ ಸಂಘಗಳ ಜೊತೆಗೂಡಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬಹುದಾಗಿರುತ್ತದೆ.

7. ಎಲ್ಲಾ ಕಾರ್ಮಿಕರ ವರ್ಗದವರು ಆಕಸ್ಮಿಕ ಅಪಘಾತ/ಮರಣಕ್ಕೊಳಗಾದಾಗ ಅವರಿಗೆ ಮತ್ತು ಅವರ ಕುಟುಂಬ ವರ್ಗದವರಿಗೆ ತಾತ್ಕಲಿಕವಾಗಿ ನೆರವು ನೀಡುವುದು. ವಿಮಾ ಯೋಜನೆ, ಉಳಿತಾಯ ಯೋಜನೆಗಳ ಕುರಿತು ಅವರಿಗೆ ತಿಳುವಳಿಕೆ ನೀಡುವುದು.

8. ಎಲ್ಲಾ ಕಾರ್ಮಿಕರ ಸಭೆ, ಸಮ್ಮೇಳನಗಳು ಮತ್ತು ವಿಚಾರ ಸಂಕಿರಣಗಳನ್ನು ಏರ್ಪಡಿಸಿ, ಅವರ ಹಕ್ಕುಬಾಧ್ಯತೆಗಳ ಕುರಿತು ತಿಳುವಳಿಕೆ ನೀಡುವುದು. ಹಾಗೂ ಉಚಿತ ಸಾಮೂಹಿಕ ವಿವಾಹಗಳನ್ನು ಏರ್ಪಡಿಸುವುದು.

9. ಉಚಿತ ಆರೋಗ್ಯ ತಪಾಸಣ, ನೇತ್ರ ಚಿಕಿತ್ಸೆ ಮತ್ತು ರಕ್ತದಾನ ಶಿಬಿರಗಳನ್ನು ಏರ್ಪಡಿಸುವುದು. ಮತ್ತು ಉಚಿತ ವಾಚನಾಲಯ, ಗ್ರಂಥಾಲಯಗಳನ್ನು ಸ್ಥಾಪಿಸುವುದು.

ಅಧ್ಯಕ್ಷರು ಪ್ರಧಾನ ಕಾರ್ಯದರ್ಶಿ

10. ಕರ್ನಾಟಕ ಆರ್ಯ ಈಡಿಗ ಕಾರ್ಮಿಕ ವರ್ಗದವರಲ್ಲಿ ಉತ್ತಮ ಸಮಾಜ ಸೇವಾಕಾಂಕ್ಷಿಯುಳ್ಳವರನ್ನು ಗುರುತಿಸಿ ಅವರಿಗೆ ಬಹುಮಾನ ಮತ್ತು ಬಿರುದುಗಳನ್ನು ನೀಡಿ ಸತ್ಕರಿಸುವುದು.

11. ರಸ್ತೆ ಬದಿಯಲ್ಲಿ ಸಾಲು ಸಸಿಗಳನ್ನು ನೆಡುವುದು, ಪರಿಸರ ಸಂರಕ್ಷಿಸುವುದು ಮೊದಲಾದ ಸಾಮಾಜಿಕ ಕಲ್ಯಾಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

12. ಎಲ್ಲ ಕಾರ್ಮಿಕರ ವರ್ಗದಲ್ಲಿ ಸಾಂಸ್ಕೃತಿಕ ಮತ್ತು ಕ್ರೀಡಾ ಮನೋಭಾವವನ್ನು ಬೆಳೆಸುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು, ಅದಕ್ಕಾಗಿ ನಾಟಕ, ಸಂಗೀತ, ನೃತ್ಯ ಮೊದಲಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

13. ಕರ್ನಾಟಕ ರಾಜ್ಯ ಕಾರ್ಮಿಕರ ವರ್ಗದವರ ಸರ್ವತೋಮುಖ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

16. ಕರ್ನಾಟಕ ಆರ್ಯ ಈಡಿಗ ಕಾರ್ಮಿಕರ ವರ್ಗದವರಿಗಾಗಿ ಉಚಿತ ಆರೋಗ್ಯ ತಪಾಸಣ ಕೇಂದ್ರಗಳು, ಆಸ್ಪತ್ರೆಗಳನ್ನು ಸ್ಥಾಪಿಸುವುದು.

17. ಕಾರ್ಮಿಕರು ತಮ್ಮ ವೃತ್ತಿಯನ್ನು ನಿರ್ವಹಿಸುವಾಗ ತೆಗೆದುಕೊಳ್ಳಬೇಕಾದ ಎಚ್ಚರಿಕೆ ಮತ್ತು ಮುಂಜಾಗ್ರತೆ ಕ್ರಮಗಳ ಬಗ್ಗೆ ತಿಳುವಳಿಕೆ ನೀಡುವುದು.

18. ಕಾರ್ಮಿಕ ವರ್ಗದವರಿಗಾಗಿ ಸರ್ಕಾರವು ನೀಡಿರುವ ಅನುಕೂಲಗಳ ಬಗ್ಗೆ (ವಿಮೆ, ಆರೋಗ್ಯ, ಸಾಲ ಇತರೆ ಸೌಲಭ್ಯಗಳ ಬಗ್ಗೆ) ಸೂಕ್ತ ಮಾಹಿತಿ ಮತ್ತು ನೆರವನ್ನು ಒದಗಿಸುವುದು.

19. ಕಾರ್ಮಿಕರು ತಮ್ಮ ವೃತ್ತಿಯ ಬಗ್ಗೆ ಇನ್ನು ಹೆಚ್ಚಿನ ತಿಳುವಳಿಕೆ, ಜ್ಞಾನ ಬೆಳೆಸಿಕೊಳ್ಳುವ ಸಲುವಾಗಿ ನುರಿತ ತಜ್ಞರಿಂದ ತಿಳುವಳಿಕೆ, ತರಬೇತಿ ಮತ್ತು ಸಲಹಾ ಶಿಬಿರಗಳನ್ನು ಏರ್ಪಡಿಸುವುದು.

20. ಮದ್ಯ, ಮಾದಕ ವಸ್ತುಗಳ ಬಳಕೆಯಿಂದ ಆರೋಗ್ಯದ ಮೇಲೆ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ತಿಳುವಳಿಕೆ ಮೂಡಿಸುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

22. ಕರ್ನಾಟಕ ಆರ್ಯ ಈಡಿಗ ಕಾರ್ಮಿಕರ ಮಕ್ಕಳ ವಿದ್ಯಾಭ್ಯಾಸಕ್ಕೆ ಸಹಾಯಕವಾಗುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

23. ಕಾರ್ಮಿಕರು, ಮಹಿಳೆಯರು ಮತ್ತು ಮಕ್ಕಳ ಹಕುಕಗಳು ಮತ್ತು ಭದ್ರತೆಗಾಗಿ ಅವಶ್ಯ ಕಾರ್ಯಕ್ರಮಗಳನ್ನು ರೂಪಿಸಿ, ಜಾರಿಗೆ ತರುವುದು.

24. ದುಡಿಯುವ ಕೈಗಳ ರಕ್ಷಣೆ-ಪದದಡಿಯಲ್ಲಿ ಕಾರ್ಮಿಕರ ಹಿತರಕ್ಷಣೆಯನ್ನು ಮಾಡುವುದು.

25. ಎಲ್ಲ ಕ್ಷೇತ್ರಗಳಲ್ಲಿ ಬಾಲ ಕಾರ್ಮಿಕ ಪದ್ಧತಿಯನ್ನು ಸಂಪೂರ್ಣವಾಗಿ ತೊಡೆದು ಹಾಕಲು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಹಾಗೂ ಈ ಕುರಿತು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು, ಬಾಲ ಕಾರ್ಮಿಕ ಪುನಶ್ಚೇತನ ಕೇಂದ್ರವನ್ನು ಸ್ಥಾಪಿಸಿ, ಇಲ್ಲಿ ನಿರಾಶ್ರಿತ ಬಾಲ ಕಾರ್ಮಿಕರಿಗೆ ವಿದ್ಯೆ, ಆಶ್ರಯ ಮತ್ತು ಆಹಾರ ಸೌಲಭ್ಯಗಳನ್ನು ಕಲ್ಪಿಸುವುದು, ಇವರ ನಿರ್ವಹಣೆಗಾಗಿ ಸರ್ಕಾರ, ಸರ್ಕಾರೇತರ, ಕಾರ್ಪೊರೇಟ್ ಮೊದಲಾದ ಸಂಸ್ಥೆಗಳಿಂದ ಅನುದಾನ, ಕೊಡುಗೆಗಳನ್ನು ಸ್ವೀಕರಿಸುವುದು.

26. ಕಾರ್ಮಿಕರ ಮೇಲಾಗುತ್ತಿರುವ ದಬ್ಬಾಳಿಕೆ, ಶೋಷಣೆ ಮೊದಲಾದವುಗಳ ನಿರ್ಮೂಲನೆಗಾಗಿ ಶ್ರಮಿಸುವುದು.

ಅಧ್ಯಕ್ಷರು ಪ್ರಧಾನ ಕಾರ್ಯದರ್ಶಿ

43. ಹೈನುಗಾರಿಕೆ, ರೇಷ್ಮೆ, ಕುರಿಸ ಸಾಕಾಣಿಕೆ, ಕೊಳಿ ಸಾಕಾಣಿಕೆ, ಖಾದಿ ಗ್ರಾಮಾದ್ಯೋಗ ಮೊದಲಾದ ವಿಭಾಗಗಳಲ್ಲಿ ತರಬೇತಿಯನ್ನು ನೀಡುವುದು.

44. ವೃದ್ದರು ಮತ್ತು ವಿಧವೇಯರಿಗೆ ಸರ್ಕಾರ ನೀಡುತ್ತಿರುವ ವೇತನವನ್ನು ಮತ್ತು ಸಂಧ್ಯಾ ಸುರಕ್ಷ ವೇತನ ಸಕ್ರಮವಾಗಿ ಫಲಾನುಭವಿಗೆ ತಲುಪುವಂತೆ ಜಾಗೃತಿಗೊಳಿಸುವುದು, ಮಕ್ಕಳು, ವೃದ್ಧರನ್ನು ಸಕ್ರಿಯವಾಗಿ ಪೋಷಿಸಲು ನ್ಯಾಯಾಲಯದ ನೀಡಿರುವ ಕಾಯ್ದೆಯ ಬಗ್ಗೆ ಮಕ್ಕಳಿಗೆ ಅರಿವು ಮೂಡಿಸುವುದು.

45. ಸರ್ಕಾರದಿಂದ ಬಡವರಿಗೆ ನೆರವಾಗುವ ಧನ ಸಹಾಯ, ಉಚಿತ ಆಟೋ ಪರ್ಮಿಟ್‌ಗಳು, ವಸತಿ ಯೋಜನೆಗಳು, ನಿವೇಶನಗಳ ವಿತರಣೆ ಮತ್ತಿತರ ವಿಷಯಗಳ ಕುರಿತು ಬಡಜನರಿಗೆ ತಿಳಿಸುವುದು ಮತ್ತು ಯೋಗ್ಯರಿಗೆ ತತ್ಸಂಭದ ಸಲಹೆ ಮತ್ತು ಮಾರ್ಗದರ್ಶನ ಕೊಡುವುದು.

46. ಹಿರಿಯ ನಾಗರೀಕರಿಗೆ ಪಾಸ್, ಬ್ಯಾಂಕ್‌ನಿಂದ ದೊರೆಯುವ ವಿಶೇಷ ಸಹಾಯ, ಬಡತನ ರೇಖೆ ಗಿಂತ ಕೆಳಗಿರುವ ಜನ ಸಾಮಾನ್ಯರಿಗೆ ಬಿಪಿಎಲ್ ಕಾರ್ಡಗಳು, ಐ.ಡಿ.ಕಾರ್ಡಗಳು, ಪಡಿತರ ಚೀಟಿಗಳು, ಆರೋಗ್ಯ ವಿಮೆ ಮೊದಲಾದ ಸೌಲಭ್ಯಗಳ ಕುರಿತು ಸೂಕ್ತ ಮಾಹಿತಿ, ಸಲಹೆ ಮತ್ತು ಮಾರ್ಗದರ್ಶನ ನೀಡುವುದು.

5. ಸಂಘದಲ್ಲಿ ಉತ್ಪತ್ತಿಯಾಗುವ ಹಣವನ್ನು ಸಂಘದ ಅಭಿವೃದ್ದಿಗಾಗಿ ಉಪಯೋಗಿಸುವುದು. ಯಾವುದೇ ಕಾರಣದಿಂದ ಆ ಹಣವನ್ನು ಸದಸ್ಯರಿಗೆ ಹಂಚಲಾಗುವುದಿಲ್ಲ.

6. ಈ ಜ್ಞಾಪನಾ ಪತ್ರ ಮತ್ತು ನಿಯಮ, ನಿಬಂಧನೆಗಳನ್ನು ಸಲ್ಲಿಸಲು ಹಾಗೂ ನೋಂದಣಾಧಿಕಾರಿಗಳೊಂದಿಗೆ ಪತ್ರ ವ್ಯವಹಾರ ಮಾಡಲು ಸಂಘದ **ಸಂಸ್ಥಾಪಕ ಅಧ್ಯಕ್ಷರಿಗೆ** ಅಧಿಕಾರವನ್ನು ನೀಡಲಾಗಿದೆ.

# ಸಂಘದ ನಿಯಮ ನಿಬಂಧನೆಗಳು

ಈ ನಿಬಂಧನೆಗಳು ಸಂಘದ ಜ್ಞಾಪನಾ ಪತ್ರದಲ್ಲಿ ನಮೂದಿಸಿರುವ ಉದ್ದೇಶಗಳನ್ನು ಈಡೇರಿಸುವ ಉದ್ದೇಶದಿಂದ ರಚಿಸಲ್ಪಟ್ಟಿರುತ್ತವೆ.

1. ಸಂಘದ ಹೆಸರು : **ಸಮಗ್ರ ಕರ್ನಾಟಕ ಕಾರ್ಮಿಕರ ಸಂಘ**

2. ಸಂಘದ ವಿಳಾಸ : ನಂ.93/2, 1ನೇ ಮುಖ್ಯರಸ್ತೆ, ಎಂ.ಎಂ.ರಸ್ತೆ, ಬ್ಯಾಟರಾಯನಪುರ, ಮೈಸೂರು ರಸ್ತೆ, ಬೆಂಗಳೂರು-560 026.

3. ಸಂಘದ ಸದಸ್ಯತ್ವ:-

ಎ. ಸಂಘದ ಧ್ಯೇಯೋದ್ದೇಶಗಳನ್ನು ಅಂಗೀಕರಿಸಿ ಸಂಘದೊಡನೆ ಸಹಕರಿಸುವ ಭಾರತ ಒಪ್ಪಂದ ಕಾಯ್ದೆ ರೀತ್ಯಾ ಅರ್ಹತೆ ಹೊಂದಿದ್ದು, 18 ವರ್ಷ ಮೇಲ್ಪಟ್ಟ ಸರ್ವರೂ ಸಂಘದ ಸದಸ್ಯತ್ವ ಪಡೆಯಲು ಅರ್ಹರಾಗಿರುತ್ತಾರೆ.

ಬಿ. ಸಂಘದ ಸದಸ್ಯತ್ವ ವರ್ಗವು ಈ ಕೆಳಕಂಡ ವರ್ಗಗಳಿಂದ ಕೂಡಿರುತ್ತದೆ.
1. ಅಜೀವ ಸದಸ್ಯತ್ವ ರೂ. 1,000/-, 2.ವಾರ್ಷಿಕ ಸದಸ್ಯತ್ವ ರೂ.250/-

ಸಿ. ಸಂಘದ ಸದಸ್ಯರಾಗಿ ಸೇರಬಯಸುವ ವ್ಯಕ್ತಿಯು ಸದಸ್ಯತ್ವಕ್ಕೆ ಅರ್ಜಿಯನ್ನು ಪ್ರವೇಶ ಧನ ಮತ್ತು ಚಂದಾ ಹಣದೊಡನೆ ಸಂಘಕ್ಕೆ ಸಲ್ಲಿಸಬೇಕು. ಅಂತಹವರನ್ನು ಸದಸ್ಯರನ್ನಾಗಿ ಸೇರಿಸಿಕೊಳ್ಳಲು ಪ್ರಧಾನ ಕಾರ್ಯದರ್ಶಿ / ಅಧ್ಯಕ್ಷರವರಿಗೆ ಅಧಿಕಾರವಿದ್ದು, ಅದಕ್ಕೆ ಮುಂದಿನ ಕಾರ್ಯಕಾರಿ ಸಮಿತಿಯ ಒಪ್ಪಿಗೆಯನ್ನು ಪಡೆಯತಕ್ಕದ್ದು. ಯಾವ ಕಾರಣದಿಂದಲೂ ಸದಸ್ಯತ್ವದ ಅರ್ಜಿಯನ್ನು ಒಪ್ಪಿಕೊಳ್ಳದಿದ್ದರೆ ಸದರಿ ಅರ್ಜಿದಾರರಿಗೆ 15 ದಿನಗಳೊಳಗಾಗಿ ಕಾರಣಗಳ ಸಮೇತ ತಿಳಿಯಪಡಿಸತಕ್ಕದ್ದು.

4. ಪ್ರವೇಶ ಪತ್ರ:-

ಸದಸ್ಯರಾಗಿ ಸೇರಲು ಇಚ್ಛಿಸುವವರು ಪ್ರವೇಶ ಪತ್ರವನ್ನು ಭರ್ತಿ ಮಾಡಿ ಆಯಾ ವರ್ಗಕ್ಕೆ ಗೊತ್ತು ಮಾಡಿರುವ ಚಂದಾ ಮತ್ತು ಪ್ರವೇಶ ಪತ್ರವನ್ನು ಸಲ್ಲಿಸತಕ್ಕದ್ದು.

5. ಸದಸ್ಯರ ಹಕ್ಕು ಬಾಧ್ಯತೆಗಳು:-

ಎ. ಸಂಘದ ಸದಸ್ಯತ್ವ ಅಂಗೀಕಾರವಾದ ದಿನದಿಂದ ಸಂಘವು ಕೈಗೊಳ್ಳುವ ಎಲ್ಲಾ ಸಾಮಾನ್ಯ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಎಲ್ಲಾ ಸದಸ್ಯರಿಗೂ ಉಚಿತ ಪ್ರವೇಶವಿರುತ್ತದೆ. ಸಂಘದ ಎಲ್ಲಾ ವರ್ಗದ ಸದಸ್ಯರಿಗೆ ವಾರ್ಷಿಕ ಸರ್ವ ಸದಸ್ಯರ ಸಭೆಯಲ್ಲಿ ಭಾಗವಹಿಸುವ, ಸ್ಪರ್ಧಿಸುವ ಮತ್ತು ಮತ ಚಲಾಯಿಸುವ ಅಧಿಕಾರ ಇರುತ್ತದೆ.

ಬಿ. ಸಂಘದ ಪ್ರಮುಖ ನಿರ್ಣಯಗಳು, ಕಾರ್ಯಕ್ರಮಗಳ ವಿವರಗಳನ್ನು ಸದಸ್ಯರಿಗೆ ಆಗಿಂದಾಗ್ಗೆ ತಿಳಿಸುವುದು.

6. ಯಾವುದೇ ಸದಸ್ಯರು ಸಂಘದ ಹಿತಕ್ಕೆ ವಿರೋಧವಾಗಿ ವರ್ತಿಸುತ್ತಾರೆಂದು ಕಂಡು ಬಂದಲ್ಲಿ , ಅವರಿಗೆ ಕನಿಷ್ಠ ಪಕ್ಷ 07 ದಿನಗಳ ಅವಧಿಯ ನೋಟೀಸನ್ನು ಕೊಟ್ಟು ಕಾರ್ಯಕಾರಿ ಸಮಿತಿಯು ಅವರ ಸದಸ್ಯತ್ವವನ್ನು ವಜಾ ಮಾಡಬಹುದು. ಅಂತಹ ಸದಸ್ಯರಿಗೆ ಸರ್ವ ಸದಸ್ಯರ ಸಭೆಗೆ ಮೇಲ್ಮನವಿ ಸಲ್ಲಿಸುವ ಅಧಿಕಾರವಿರುತ್ತದೆ.

7. ಸಂಘದ ಸಾಮಾನ್ಯ ಸದಸ್ಯರ ಅವಧಿ ಏಪ್ರಿಲ್ ತಿಂಗಳಿಂದ ಮಾರ್ಚ್ ತಿಂಗಳ ಅಂತ್ಯದವರೆಗೆ ಇರುವುದು. ವರ್ಷದ ನಡುವೆ ಯಾವಾಗ ಸದಸ್ಯರಾದರೂ ಸಹ ಆ ಸದಸ್ಯತ್ವವು ಆ ವರ್ಷಕ್ಕೆ ಸೇರುತ್ತದೆ.

8. ಸದಸ್ಯತ್ವ ನಿಂತು ಹೋಗುವುದು:-

ಮರಣ ಹೊಂದಿದರೆ, ಬುದ್ಧಿ ಭ್ರಮಣೆಯಾದರೆ, ಸದಸ್ಯತ್ವದಿಂದ ವಜಾ ಮಾಡಲ್ಪಟ್ಟರೆ, ರಾಜಿನಾಮೆ ಕೊಟ್ಟರೆ, ಕಾನೂನು ಪ್ರಕಾರ ಅನರ್ಹ ವ್ಯಕ್ತಿಯೆಂದು ಘೋಷಿಸಲ್ಪಟ್ಟಲ್ಲಿ, 3 ತಿಂಗಳ ಅವಧಿಗಿಂತ ಹೆಚ್ಚು ದಿನ ಸದಸ್ಯತ್ವ ಚಂದಾ ಹಣಬಾಕಿ ಇದ್ದರೆ, ಸಂಘದ ಉದ್ದೇಶಗಳಿಗೆ ವಿರುದ್ಧವಾಗಿ ವರ್ತಿಸುತ್ತಿರುವುದು ಕಂಡು ಬಂದರೆ ಅಥವಾ ಸಂಘದ ಹಿತಕ್ಕೆ ದಕ್ಕೆ ಬರುವಂತಹ ಕೆಲಸ ಮಾಡಿದಲ್ಲಿ ಸಂಘದ ಸದಸ್ಯತ್ವ ರದ್ದಾಗುವುದು.

ಅಧ್ಯಕ್ಷರು　　　　　　　　　　ಪ್ರಧಾನ ಕಾರ್ಯದರ್ಶಿ

27. ಕಾರ್ಮಿಕರ ಮೂಲಭೂತ ಹಕ್ಕುಗಳ ಕುರಿತು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು. ನಗರ ಮತ್ತು ಗ್ರಾಮ ಪ್ರದೇಶಗಳಲ್ಲಿ ವಾಸವಾಗಿರುವ ಬಡಜನರ ಸರ್ವತೋಮುಖ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

28. ಕಾರ್ಮಿಕರಿಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರೂಪಿಸಿರುವ ಕಾಯಿದೆಗಳ ಕುರಿತು ಕಾರ್ಮಿಕರಲ್ಲಿ ಅರಿವು ಮೂಡಿಸುವುದು.

29. ಕೆಲಸದ ಸಂದರ್ಭಗಳಲ್ಲಿ ಸಂಭವಿಸುವ ಆಕಸ್ಮಿಕ ಅಪಘಾತಗಳಿಂದ ಕಾರ್ಮಿಕರು ತೊಂದರೆಗಿಡಾದಲ್ಲಿ, ಆ ಕಾರ್ಮಿಕರು ಮತ್ತು ಅವರ ಕುಟುಂಬ ವರ್ಗದವರ ಭವಿಷ್ಯತ್ತಿಗಾಗಿ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.

30. ಕಾರ್ಮಿಕರ ಹಕ್ಕು ಭಾಧ್ಯತೆಗಳ ಕುರಿತು ಪತ್ರಿಕೆ, ರೇಡಿಯೋ ಮತ್ತು ಟಿವಿ ಮೊದಲಾದ ಮಾಧ್ಯಮಗಳಲ್ಲಿ ಜಾಹಿರಾತುಗಳನ್ನು ನೀಡುವುದರ ಮೂಲಕ, ಜಾಗೃತಿಯನ್ನು ಮೂಡಿಸುವುದು.

31. ವಿವಿಧ ರಂಗಗಳಲ್ಲಿ ದುಡಿಯುತ್ತಿರುವ ಮಹಿಳೆಯರ ಸುರಕ್ಷತೆಗಳ ಕುರಿತು, ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

32. ಮಹಿಳ ಕೆಲಸಗಾರರು ತಮ್ಮ ಮೇಲೆ ನಡೆಯುವ ಲೈಂಗಿಕ ಶೋಷಣೆ, ದೌರ್ಜನ್ಯ ಕುರಿತು ಬಹಿರಂಗವಾಗಿ ಹೇಳಿಕೊಳ್ಳಲು, ಸಂಘದ ವತಿಯಿಂದ ವೇದಿಕೆಯನ್ನು ಕಲ್ಪಿಸುವುದು, ಇದಕ್ಕಾಗಿ ಸಮಾಲೋಚನ ಕೇಂದ್ರವನ್ನು ಸ್ಥಾಪಿಸುವುದು.

33. ಮಹಿಳಾ ಹಕ್ಕುಗಳು ಮತ್ತು ರಕ್ಷಣೆಗಾಗಿ ಶ್ರಮಿಸುವುದು. ಅನಾಥ ಮಕ್ಕಳ, ಬಾಲಕಾರ್ಮಿಕರು ಹಾಗೂ ಕಡು ಬಡವರ ಮಕ್ಕಳಿಗೆ ಉಚಿತ ಊಟ, ವಸತಿ, ವಿದಾಭ್ಯಾಸ, ಊಟ ಹಾಗೂ ವೈದ್ಯಕೀಯ ಚಿಕಿತ್ಸೆಗಳನ್ನು ನೀಡುವುದು.

34. ಉದ್ಯೋಗಾಂಕ್ಷಿ ಮಹಿಳೆಯರಿಗಾಗಿ ದೊರೆಯಬಹುದಾದ, ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಾಯ, ಸೌಲಭ್ಯಗಳು, ಅನುದಾನಗಳು ಮೊದಲಾದವುಗಳ ಬಗ್ಗೆ ತಿಳುವಳಿಕೆ ನೀಡುವುದು.

35. ಮಹಿಳಾ ಮತ್ತು ಕಾರ್ಮಿಕರಲ್ಲಿ ಸ್ವಸಹಾಯ ಗುಂಪುಗಳನ್ನು ರಚಿಸಿ, ಆರ್ಥಿಕವಾಗಿ ಸ್ವಾವಲಂಭಿಗಳಾಗಲು ಅವಶ್ಯಕ ಕಾರ್ಯಕ್ರಮಗಳನ್ನು ರೂಪಿಸುವುದು.

36. ಮಹಿಳೆಯರ ಆತ್ಮ ರಕ್ಷಣೆಗಾಗಿ ಪೋಲೀಸ್, ಮಾಧ್ಯಮ ಮೊದಲಾದ ಮಾಧ್ಯಗಳ ಪರಿಣಾಮಕಾರಿಯಾಗಿ ಬಳಕೆಯಾಗುವಂತೆ ಶ್ರಮಿಸುವುದು.

37. ಮಹಿಳೆಯರ ಕೌಶಲ್ಯ ವೃದ್ಧಿಗಾಗಿ ವಿಶೇಷ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

38. ಸಂಘದ ವತಿಯಿಂದ ಸರ್ವರ ಬಳಕೆಗಾಗಿ ಸಮುದಾಯ ಭವನ, ಕಲ್ಯಾಣ ಮಂಟಪ, ಆಸ್ಪತ್ರೆ, ಶೈಕ್ಷಣಿಕ ವಿದ್ಯಾ ಸಂಸ್ಥೆಗಳನ್ನು ಸ್ಥಾಪನೆ ಮಾಡುವುದು.

39. ಕಾರ್ಮಿಕರಿಗೆ ಪಿಎಫ್, ಇಎಸ್ಐ ಸೌಲಭ್ಯದ ಬಗ್ಗೆ ಮಾಹಿತಿಯನ್ನು ಒದಗಿಸುವುದು.

40. ಸಮಾಜದಲ್ಲಿನ ಮಹಿಳೆಯರ ಸಭೆ, ಸಮ್ಮೇಳನಗಳನ್ನು ಏರ್ಪಡಿಸಿ ಅವರ ಹಕ್ಕುಬಾಧ್ಯತೆಗಳ ಕುರಿತು ತಿಳುವಳಿಕೆಗಳನ್ನು ನೀಡುವುದು.

41. ಸಮಾಜದಲ್ಲಿನ ಮಹಿಳೆಯರಲ್ಲಿ ಕಾನೂನು ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

42. ಸಮಾಜದಲ್ಲಿನ ಮಹಿಳೆಯ ವಿರುದ್ಧ ನಡೆಯುವ ಶೋಷಣೆ, ವರದಕ್ಷಿಣೆ, ದೌರ್ಜನ್ಯ ಮೊದಲಾದವುಗಳನ್ನು ಸಂಪೂರ್ಣವಾಗಿ ನಿರ್ಮೂಲನಾ ಮಾಡಲು ಅವಶ್ಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

ಅಧ್ಯಕ್ಷರು ಪ್ರಧಾನ ಕಾರ್ಯದರ್ಶಿ

05. ಯೋಗೇಶ್
ನಂ.300, 80 ಅಡಿ ರಸ್ತೆ, AIT ಕಾಲೇಜ್
ಎದುರು, ಕೆಂಗುಂಟೆ, ಮಲ್ಲತ್ತಹಳ್ಳಿ,
ಬೆಂಗಳೂರು-56.
33 ಸೂಪರ್‌ವೈಸರ್ ಸಹ ಕಾರ್ಯದರ್ಶಿ



06. ಹರೀಶ್ ಕುಮಾರ್
ಸುಗ್ಗನಹಳ್ಳಿ ಗ್ರಾಮ ಮತ್ತು ಅಂಚೆ,
ಕಸಬಾ ಹೋಬಳಿ, ರಾಮನಗರ ತಾ॥,
ರಾಮನಗರ ಜಿಲ್ಲೆ-562 128.
38 ವಕೀಲರು ಕಾನೂನು ಸಲಹೆಗಾರರು



07. ಮಂಜುನಾಥ್.ಎನ್
ನಂ.52/2, ಮಲ್ಲತ್ತಹಳ್ಳಿ, ರಾಮಂಜನೇಯ
ದೇವಸ್ಥಾನದ ಹತ್ತಿರ, ಬೆಂಗಳೂರು-56.
36 ಚೋಳಮಂಡಲಂ ಕಲೆಕ್ಷನ್ ಆಫೀಸರ್ ಖಜಾಂಚಿ





ಸಾಕ್ಷಿಗಳು: ಹೆಸರು ಮತ್ತು ವಿಳಾಸ ವಯಸ್ಸು ಉದ್ಯೋಗ ರುಜು Manjunath. N

[illegible] Bangalore.

# ಸಮಗ್ರ ಕರ್ನಾಟಕ ಕಾರ್ಮಿಕರ ಸಂಘ

ನಂ.93/2, 1ನೇ ಮುಖ್ಯರಸ್ತೆ, ಎಂ.ಎಂ.ರಸ್ತೆ, ಬ್ಯಾಟರಾಯನಪುರ, ಮೈಸೂರು ರಸ್ತೆ, ಬೆಂಗಳೂರು-560 026.

ಕಾರ್ಯಕಾರಿ ಸಮಿತಿ ಸದಸ್ಯರ ಪಟ್ಟಿ:

| ಕ್ರ.ಸಂ. | ಹೆಸರು ಮತ್ತು ವಿಳಾಸ<br>ಶ್ರೀಮತಿ/ಶ್ರೀಯುತರಾದ :- | ವಯಸ್ಸು | ಉದ್ಯೋಗ | ಪದವಿ |
|---|---|---|---|---|
| 01. | ಯತೀಶ್ ಕುಮಾರ್.ಟಿ.ಎಂ.ಸಿ<br>ನಂ.93/2, 1ನೇ ಮೈನ್, ಎಂ.ಎಂ.ರಸ್ತೆ,<br>ಬ್ಯಾಟರಾಯನಪುರ, ಮೈಸೂರು ರಸ್ತೆ,<br>ಬೆಂಗಳೂರು-26. | 37 | ಚೋಳಮಂಡಲಂ<br>ಸೀನಿಯರ್ ಅಧಿಕಾರಿ | ಸಂಸ್ಥಾಪಕ ಅಧ್ಯಕ್ಷರು<br> |
| 02. | ಭಾಗ್ಯ. ಸಿ<br>ನಂ.68, 5ನೇ ಕ್ರಾಸ್, 2ನೇ ಹಂತ,<br>ವಿಶ್ವೇಶ್ವರನಗರ, ಮೈಸೂರು-570 008. | 38 | ಸಮಾಜ ಸೇವೆ | ಪ್ರಧಾನ ಕಾರ್ಯದರ್ಶಿ<br> |
| 03. | ಯೋಗೇಶ್.ಎಸ್<br>ನಂ.642, ಸುಭಾಷ್‌ನಗರ, ಹೆಬ್ಬಾಳ<br>1ನೇ ಹಂತ, ಮೆಟಗನಹಳ್ಳಿ ಅಂಚೆ,<br>ನಿಂಗೈಯ್ಯನ ಕೆರೆ, ಮೈಸೂರು-570 016. | 46 | ಸೂಪರ್‌ವೈಸರ್ | ಸಹ ಕಾರ್ಯದರ್ಶಿ<br> |
| 04. | ಲಕ್ಷ್ಮೀಬಾಯಿ.ಬಿ.ಎಸ್<br>ನಂ.1, 9ನೇ ಕ್ರಾಸ್, 17ನೇ ಮೈನ್,<br>ಗಿರಿಮಾರುತಿ ಸ್ಕೂಲ್ ಹತ್ತಿರ,<br>ಮುನೇಶ್ವರ ಬ್ಲಾಕ್, ಬೆಂಗಳೂರು-26. | 63 | ಸಮಾಜ ಸೇವೆ | ಸಹ ಕಾರ್ಯದರ್ಶಿ<br> |